(ಗೊಂದಲ)

ಶ್ರೀ ಬಿ ಆರ್ ಪಾಟೀಲ್ – ನೀವು ರಿಮೋಟ್ ಕಂಟ್ರೋಲ್‌ನಿಂದ ಹೊರಗೆ ಬಂದರೆ ನೀವು ಸರಿಹೋಗುತ್ತದೆ

(ಗೊಂದಲ)

ಉಪಾಧ್ಯಕ್ಷರು – ಆಯಿತು, ಅವರು ಹೇಳುತ್ತಿದ್ದಾರಲ್ಲಾ, ಒಂದು ನಿಮಿಷ ಸುಮ್ಮನಿರಿ

ಶ್ರೀ ಬಸವರಾಜ್ ಎಸ್ ಹೊರಟ್ಟಿ – ಅಧ್ಯಕ್ಷರೇ, ಈ ಸಾರಿ ಕಡ್ಡಾಯವಾಗಿ ನಂಜುಂಡಪ್ಪ ವರದಿಯ ಪ್ರಕಾರ ಮೊದಲು ಎಲ್ಲಾ ತಾಲ್ಲೂಕುಗಳಿಗೆ ಆದ್ಯತೆಯನ್ನು ಕೊಟ್ಟ ನಂತರ ಉಳಿದ ತಾಲ್ಲೂಕುಗಳಿಗೆ ಪರಿಗಣಿಸಲಾಗುವುದು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ ನಂಜುಂಡಪ್ಪ ವರದಿಯ ಪ್ರಕಾರ ಎಲ್ಲಾ ತಾಲ್ಲೂಕುಗಳಿಗೆ ಕೊಡುತ್ತೇನೆಂದು ಹೇಳುತ್ತಿದ್ದೇನೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – ಈಗ ಪಟ್ಟಿಯನ್ನು ನೀವೇ ಫೈನಲ್ ಮಾಡುತ್ತೀರಾ ಎಂದು ಹೇಳಬೇಕು

ಉಪಾಧ್ಯಕ್ಷರು – ಸುನಿಲ್ ಕುಮಾರ್, ಇಲ್ಲವೇ, ಡಾ॥ ಸಿರಿಯಣ್ಣನವರ್

ಶಿಕ್ಷಕರ ಅಮಾನತ್ತು

298 (2119) ಡಾ॥ ಸಿರಿಯಣ್ಣನವರ್ ಆರ್ ಬಿ, (ನವಲಗುಂದ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಲಗುಂದ ತಾಲ್ಲೂಕಿನ ಶಿರ್ಲಾಪೂರ ಗ್ರಾಮದಲ್ಲಿ ದಿ 4–2–2007 ರಂದು ಶಾಲಾ ಕೊರಡಿಗಳ ಭೂಮಿ ಪೂಜೆ ಸಮಾರಂಭವನ್ನು ಪಂಚಾಯತ್ ಸಮಿತಿಯವರು ಅಲ್ಲಿನ ಶಾಸಕರ ಸಮ್ಮುಖದಲ್ಲಿ ಜರುಗಿಸಿದ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ

ಮಾಡಲಿಲ್ಲವೆಂಬ ಆಪಾದನೆ ಮೇರೆಗೆ ಇಬ್ಬರು ಮುಖ್ಯ ಶಿಕ್ಷಕರುಗಳನ್ನು ಅಮಾನತ್ತಿನಲ್ಲಿಟ್ಟಿರುವುದು ನಿಜವೇ,

ಆ) ಈ ಇಬ್ಬರು ಶಿಕ್ಷಕರು ಯಾವ ರೀತಿ ಶಿಷ್ಟಾಚಾರವನ್ನು ಉಲ್ಲಂಘಿಸಿದ್ದಾರೆ,

ಇ) ಶಿಷ್ಟಾಚಾರವನ್ನು ಉಲ್ಲಂಘಿಸದಿದ್ದಲ್ಲಿ ಅಮಾನತ್ತಿನಲ್ಲಿಟ್ಟಂತಹ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ಶ್ರೀ ಜಿ ಹೆಚ್ ಶಿರ್ಲಾಪೂರ, ಮುಖ್ಯ ಗುರುಗಳು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಿರ್ಲಾಪೂರ, ಶ್ರೀಮತಿ ಆರ್ ವೈ ದೊಡಮನಿ, ಮುಖ್ಯ ಶಿಕ್ಷಕರು, ಸ ಹಿ ಪ್ರಾ ಕ ಗಂ ಶಾಲೆ, ಶಿರ್ಲಾಪೂರ ಇವರುಗಳನ್ನು ಶಿಷ್ಟಾಚಾರ ಪಾಲನೆ ಮಾಡಲಿಲ್ಲವೆಂದು ಮೇಲ್ನೋಟಕ್ಕೆ ಸಾಬೀತಾದ್ದರಿಂದ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವರು

ಆ) ದಿ 4–2–2007 ರಂದು ಶಿರ್ಲಾಪೂರ ಗ್ರಾಮದಲ್ಲಿ ಶಾಲಾ ಕೊರಡಿಗಳ ಅಡಿಗಲ್ಲು ಸಮಾರಂಭ ನಡೆದಿದ್ದು, ಈ ಸಮಾರಂಭದಲ್ಲಿ ಇಬ್ಬರು ಮುಖ್ಯ ಶಿಕ್ಷಕರುಗಳು ಉಪಸ್ಥಿತರಿದ್ದು, ನಿಯಮಾನುಸಾರ ವಿಧಾನ ಪರಿಷತ್ ಸದಸ್ಯರು ಹಾಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ಶ್ರೀ ಬಸವರಾಜ ಹೊರಟ್ಟಿ ರವರನ್ನು ಈ ಸಮಾರಂಭಕ್ಕೆ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿರುವರು

ಇ) ಸದರಿ ಮುಖ್ಯ ಶಿಕ್ಷಕರು ಶಿಷ್ಟಾಚಾರ ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು

ಡಾ॥ ಸಿರಿಯಣ್ಣನವರ್ ಆರ್ ಬಿ – ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಒದಗಿಸಲಾಗಿದೆ, ನನ್ನ ಕ್ಷೇತ್ರದಲ್ಲಿ 4 2 2007 ರಲ್ಲಿ ಶಾಲಾ ಕೊರಡಿಗೆ ಭೂಮಿ ಪೂಜೆಯನ್ನು ನನ್ನ ಅಧ್ಯಕ್ಷತೆಯಲ್ಲಿ ಮಾಡಲಾಗಿತ್ತು ಯಾವುದೇ ಕಾರಣವಿಲ್ಲದೆ ಎರಡು ಜನ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಶಿಷ್ಟಾಚಾರ ಪಾಲನೆ ಮಾಡಿಲ್ಲವೆಂಬ

ಕಾರಣದ ಮೇಲೆ ಮಾನ್ಯ ಸಚಿವರು ಇವರಿಬ್ಬರನ್ನು ಸಸ್ಪೆಂಡ್ ಮಾಡಿದ್ದಾರೆ ಶಿಷ್ಟಾಚಾರ ನನಗೆ ತಿಳಿದ ಪ್ರಕಾರ ಸರ್ಕಾರಿ ಸಮಾರಂಭಗಳು ಇದ್ದಲ್ಲಿ ಮಾತ್ರ ಸಾರ್ವಜನಿಕರು ಮಾಡಿದ ಸಮಾರಂಭಕ್ಕೆ ಶಿಷ್ಟಾಚಾರ ಅನ್ವಯಿಸುವುದಿಲ್ಲ ನಾನು ಇಲ್ಲಿ invitation card ತಂದಿದ್ದೇನೆ, ಇದನ್ನು ಮಾಡಿದ್ದು ಶ್ರೀ ಶರಣ ಬಸವೇಶ್ವರ ದೇವಸ್ಥಾನದ ಕಮಿಟಿ, ಶ್ರೀ ಲಕ್ಕಮ್ಮ ದೇವಿ ದೇವಸ್ಥಾನದ ಕಮಿಟಿ ಶ್ರೀ ಹುಚ್ಚೇಶ್ವರ ದೇವಸ್ಥಾನದ ಕಮಿಟಿ ಸಾರ್ವಜನಿಕರು ಈ ಸಮಾರಂಭವನ್ನು ಆಯೋಜಿಸಿದ್ದರು ಆ ಮೂರು ಸಮಾರಂಭಗಳು ಮುಗಿದ ವೇಳೆಗೆ ಎಸ್ ಡಿ ಎಂ ಸಿ ಸದಸ್ಯರು ಕೂಡಿಕೊಂಡು ನನಗೆ ಗುದ್ದಲಿ ಪೂಜೆ ಮಾಡಲಿಕ್ಕೆ ಹೇಳಿದರು ಆ ಗುದ್ದಲಿ ಪೂಜೆಯನ್ನು ನಾನು ಮಾಡಿದೆ ನನ್ನ ಕ್ಷೇತ್ರ ಆ ತಾಲ್ಲೂಕಿನ ಶಾಸಕ ನಾನು, ಆದರೂ ಸಹ ನಮ್ಮ ಸಚಿವರು ಇಬ್ಬರು ಶಿಕ್ಷಕರನ್ನು ಯಾವುದೇ ಕಾರಣವಿಲ್ಲದೆ ಸಸ್ಪೆಂಡ್ ಮಾಡಿದ್ದಾರೆ ದಯವಿಟ್ಟು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ ಇದಕ್ಕೆ ಶಿಷ್ಟಾಚಾರ ಅನ್ವಯಿಸುವುದಿಲ್ಲ

ಶ್ರೀ ಎಸ್ ಬಸವರಾಜ್ ಹೊರಟ್ಟಿ – ಮಾನ್ಯ ಅಧ್ಯಕ್ಷರೇ, ಶಿಷ್ಟಾಚಾರ ಇಲ್ಲವೆನ್ನುವ ಮಾತನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಇದೇ ರೀತಿಯಲ್ಲಿ ಇದನ್ನು ನಾವು ಮಾಡುತ್ತಿರಲಿಲ್ಲ ಇದೇ ರೀತಿಯಲ್ಲಿ ನಮ್ಮ ರೋಣ ತಾಲ್ಲೂಕಿನಲ್ಲಿ ಒಬ್ಬರು ಶಿಕ್ಷಕರು ಇದ್ದಂಧವರು ಶಾಸಕರನ್ನು ಕರೆದಿರಲಿಲ್ಲ, ಕರೆಯಲಿಕ್ಕೆ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆಂದು ಸಿ ಇ ಒ ರವರು ಸಸ್ಪೆಂಡ್ ಮಾಡಿದರು ಇದು ಅನೇಕ ಕಡೆಗೆ ಆಗಿದೆ, ಹಿಂದೆಯೂ ಸಹ ಆಗಿದೆ, ಇವತ್ತು ಏನಾಗಿದೆಯೆಂದರೆ, ನಾನು ನಿಯಮಗಳನ್ನು ಓದುತ್ತಿದ್ದೇನೆ "25 2 2002 ರಂದು ನಾನು ಎಲ್ಲವನ್ನು ಓದುವುದಿಲ್ಲ ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳಾದ ಸಂಸತ್ ಸದಸ್ಯರು ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರು ಮಹತ್ವಪೂರ್ಣವಾದುದು, ಆದ್ದರಿಂದ ಸರ್ಕಾರದ ವತಿಯಿಂದ ನಡೆಯುವಂಧ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಮಾರಂಭಗಳಿಗೆ ಸ್ಥಳೀಯ ಸಂಸತ್ ಸದಸ್ಯರು ವಿಧಾನ ಪರಿಷತ್ತಿನ ಸದಸ್ಯರು, ವಿಧಾನ ಸಭೆಯ ಸದಸ್ಯರನ್ನು ತಪ್ಪದೆ ಆಹ್ವಾನಿಸುವುದಲ್ಲದೆ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲು ಕ್ರಮ ತೆಗೆದುಕೊಳ್ಳಲು ಸೂಚಿಸಲಾಗಿದೆ ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂಧ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ

ತೆಗೆದುಕೊಳ್ಳಲಾಗುವುದು" ಎನ್ನುವಂಥ ಮಾತನ್ನು ಹೇಳಿದ್ದಾರೆ ಶಾಸಕರು ಏನು ಹೇಳುತ್ತಾರೆ, ಅಲ್ಲಿ ಗುದ್ದಲಿ ಪೂಜೆ ಮಾಡುವುದಕ್ಕೆ ಯಾವುದೋ ಒಂದು ಗುಡಿಗಳಿಗೆ ಹೋಗಿದ್ದೆವು, ಆಗ ಮಾಡಿದರು ಎಂದು ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಇವತ್ತು ಶಾಸಕರು ಬೇಕಾದ್ದು ಮಾಡಲಿ, ಅದರ ಬಗ್ಗೆ ತಕರಾರು ಇಲ್ಲ ಯಾವ ಶಾಲೆಯ ಮುಖ್ಯೋಪಾಧ್ಯಾಯರು ಒಂದು ಸಲ ಅಲ್ಲ ಇದು ಮೊದಲು ಈ ಹಿಂದೆ ಅವರು ಶಿಷ್ಟಾಚಾರವನ್ನು ಮೀರಿ ಇದೇ ರೀತಿ ಮಾಡಿದ್ದರು ನಾನು ಅಲ್ಲಿನ ವಿಧಾನ ಪರಿಷತ್ತಿನ ಸದಸ್ಯನಾಗಿದ್ದೆ ಹೆಚ್ ಕೆ ಪಾಟೀಲರು ವಿಧಾನ ಪರಿಷತ್ತಿನ ಸದಸ್ಯರಿದ್ದರು ಕೆಲವರನ್ನು ಕರೆದು ಕೆಲವರನ್ನು ಬಿಟ್ಟ ನಂತರ ಏನಾಗುತ್ತಿದೆ? ಉಳಿದವರನ್ನು ಹೇಗೆ ಕರೆದರು ಎಂಬ ಪ್ರಶ್ನೆ ಅಲ್ಲಿ ಬರುತ್ತದೆ ಇದು ಬಂದಾಗ ಯಾವ ಮುಖ್ಯ ಶಿಕ್ಷಕರು ಇಬ್ಬರು ಅಲ್ಲಿ ಕುಳಿತುಕೊಂಡು ಆ ಕಾರ್ಯಕ್ರಮವನ್ನು ನಿಯೋಜನೆ ಮಾಡಿದಾಗ ಅನೇಕ ಜನ ಈ ಬಗ್ಗೆ ತಕರಾರು ತೆಗೆದರು ತಕರಾರು ತೆಗೆದ ನಂತರ ರೋಣದಲ್ಲಿ ಒಂದು ಕಾಯ್ದೆ, ಇಲ್ಲಿ ಏಕೆ ಒಂದು ಕಾಯ್ದೆ ಎನ್ನುವಂತಹ ಮಾತನ್ನು ಅದೇ ಊರಿನ ಜನ ಬಂದು ನಮ್ಮಲ್ಲಿ ಧರಣಿ ಕುಳಿತರು ಆಮೇಲೆ ನಾನು ಆ ಅಧಿಕಾರಿಯನ್ನು ಕೇಳಿದೆ ಹೌದು, ಅವರು ಶಿಷ್ಟಾಚಾರವನ್ನು ಪಾಲಿಸಿಲ್ಲವೆಂದರು ಡಿ ಡಿ ಪಿ ಐ ಮತ್ತು ಬಿ ಇ ಓ ಗಳನ್ನು ಕೇಳಿದಾಗ ಡಿ ಡಿ ಪಿ ಐ ಮತ್ತು ಬಿ ಇ ಓ ಗಳು ನಮಗೂ ಹೇಳಲಿಲ್ಲ ನಾವು ಹೇಳಿದೆವು ಆ ಒಂದು ದೃಷ್ಟಿಯಿಂದ ಪದೇ ಪದೇ ಶಾಸಕರನ್ನು ನಿಷ್ಕಾಳಜಿ ಮಾಡುತ್ತಾರೆ, ಬೇಕಾದವರನ್ನು ಹಾಕುತ್ತಾರೆ ಎನ್ನುವ ದೃಷ್ಟಿಯಿಂದ ಅವರ ಮೇಲೆ ಕ್ರಮ ತೆಗೆದುಕೊಂಡಿದೆ ವಿಚಾರಣೆಯನ್ನು ಮಾಡುತ್ತಾರೆ, ಅಮಾನತ್ತು ಮಾಡಿರುವುದು ಏನೂ ಶಿಕ್ಷೆಯಲ್ಲ ವಿಚಾರಣೆ ಮಾಡುತ್ತಾರೆ ಅದು ಸರಿಯಾಗಿದ್ದರೆ ಅವರನ್ನು reinstrate ಮಾಡುವಂತಹ ಕೆಲಸವನ್ನು ಮಾಡುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ಮಾನ್ಯ ಅಧ್ಯಕ್ಷರೇ, ಇಲ್ಲಿ ಮಂತ್ರಿಗಳನ್ನು ಕರೆಯದೇ ಇದ್ದುದ್ದೇ ಶಿಷ್ಟಾಚಾರಕ್ಕೆ ಅಡಚಣೆಯಾಗಿದೆ ಎನ್ನುವುದು ಮಂತ್ರಿಗಳು ಆಕಸ್ಮಾತ್ ಆಗಿ ಆ ಕ್ಷೇತ್ರದ ಶಾಸಕರಿದ್ದಾರೆ ಯಾವುದೋ ದೇವಸ್ಥಾನದ ಕೆಲಸಕ್ಕೆ ಹೋದಾಗ ಒಂದು ಸಣ್ಣ ಶಾಲಾ ಕೊರಡಿಗೆ ಗುದ್ದಲಿ ಪೂಜೆ ಮಾಡಿರುವುದಕ್ಕೆ,

ನೀವು ಈ ರೀತಿ ಹೇಳಿದರೆ ಹೇಗೆ? ಇಲ್ಲಿಂದ ಮುಂದಕ್ಕೆ ಶಾಸಕರನ್ನು ಯಾರೂ ಕರೆಯುವುದಿಲ್ಲ

ಶ್ರೀ ಬಸವರಾಜ ಎಸ್ ಹೊರಟ್ಟಿ – ನಾವು ಶಾಸಕರನ್ನು ಕರೆಯಬೇಡಿ ಎಂದು ಹೇಳಲಿಲ್ಲ ಶಾಸಕರನ್ನು ಕರೆಯಬೇಕೆಂದು ಇದೆ ಅದೇ ಕೇಸು ಬಂತು ಅದೇ ಕೇಸ್ ಬಂದಾಗ ಅವರಿಗೆ ಬೇಕು ಬೇಕಾದವರನ್ನು ಕರೆದು ಸರ್ಕಾರಿ ನೌಕರರು ಮಾಡಿದರೆ ಹೇಗೆ? ನನ್ನನ್ನು ಕರೆಯಲಿಲ್ಲವೆಂದು ಅಲ್ಲ ದಯಮಾಡಿ ತಾವು ತಪ್ಪು ತಿಳಿದುಕೊಳ್ಳಬೇಡಿ ನಮ್ಮನ್ನು ಕರೆದಿದ್ದಲ್ಲ ಯಾರನ್ನೂ ಕರೆದಿಲ್ಲ, ಬೇಕಾದವರನ್ನು ಕರೆದು ಬೇರೆಯವರನ್ನು ಏತಕ್ಕೆ ಕರೆಯುತ್ತಾರೆ, ಶಿಷ್ಟಾಚಾರಕ್ಕೆ ಇವತ್ತು ಪೂರ್ಣ ಅಡಿಗಲ್ಲನ್ನು ಹಾಕಿದ್ದಾರೆ ಇದೇ ಹಿಂದೆ ಅವರು opening ಮಾಡುವಾಗಲೂ ಅದೇ ರೀತಿ ಮಾಡಿದ್ದರು ಪ್ರತಿ ಸಾರಿ ಈ ಊರಿನಲ್ಲಿ ಏಕೆ ಆಗುತ್ತಿದೆ ಇನ್ನುಳಿದಂಥ ಊರಿನಲ್ಲಿ ಏಕೆ ಆಗುವುದಿಲ್ಲ ಅದೇ ಊರಿನಲ್ಲಿ ನಮ್ಮನ್ನು ಕರೆಯುವುದಲ್ಲ, ಇದು ಮೊದಲನೇ ಸಾರಿಯಲ್ಲ, ಎರಡು ಬಾರಿ ಈ ರೀತಿ ಆಗಿದ್ದುದರಿಂದ, ಊರವರೆಲ್ಲಾ ಕೂಡಿ ತಕರಾರು ಕೊಟ್ಟಿದ್ದರಿಂದ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದೆ, ಕ್ರಮ ತೆಗೆದುಕೊಂಡಿದ್ದಾರೆ ನನ್ನ ಪ್ರಕಾರ ನಾನು ವಿಧಾನಪರಿಷತ್ತಿನ ಸದಸ್ಯನಾಗಿದ್ದೇನೆ, ಅಲ್ಲಿ ಬೇರೆಯವರು ಇದ್ದಾರೆ, ಅವರನ್ನೇಕೆ ಕರೆದಿಲ್ಲ ಹೀಗಾಗಿ ಒಂದೇ ಪಕ್ಷದವರನ್ನು ಕರೆಯುತ್ತಾರೆಂಬ ಭಾವನೆ ಬರುತ್ತದೆ ನೀವು ಹೀಗೆ ಮಾಡುತ್ತೀರಿ ಎನ್ನುವ ತಕರಾರುಗಳು ಬರುತ್ತವೆ, ಹೀಗಾಗಬಾರದು ಎನ್ನುವುದಕ್ಕೆ ಮೊದಲನೇ ಸಾರಿ ನಾವು warning ಕೊಟ್ಟೆವು, ಆ warning ಅನ್ನು ಧಿಕ್ಕರಿಸಿ ಮತ್ತೆ ಪದೇ ಪದೇ ಅದೇ ರೀತಿ ಆದುದರಿಂದ ಈ ಕ್ರಮ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ

ಶ್ರೀ ಜೆ ಸಿ ಮಾಧುಸ್ವಾಮಿ – ನಮ್ಮ ಪ್ರಶ್ನೆ ವಿಧಾನ ಪರಿಷತ್ತು ಸದಸ್ಯರಿಗೆ ನೋಡಲ್ ತಾಲ್ಲೂಕು ಅಂತ ಹೇಳಿ ಆ ಜಿಲ್ಲೆಯಲ್ಲಿ ಅವರು declare ಮಾಡಿಕೊಂಡಿದ್ದರೆ ಮಾತ್ರ ಅವರನ್ನು ಕರೆಯಬೇಕೆಂದು ಸರ್ಕಾರದ ಆದೇಶವಿದೆ ವಿಧಾನ ಪರಿಷತ್ತಿನ ಸದಸ್ಯರನ್ನು ಕರೆಯಲಿಲ್ಲವೆಂದು ಹೇಳಿ ಎಲ್ಲಿಯಾದರೂ, ನಾವು ಮಂತ್ರಿಯಾಗಿ ಕರೆಯಲಿಲ್ಲವೆಂದು ಶಿಷ್ಟಾಚಾರ ಹೇಳುವುದಕ್ಕೆ ಬರುವುದಿಲ್ಲ ವಿಧಾನ

ಪರಿಷತ್ತು ಸದಸ್ಯರು ಎಂದು ಕರೆಯಲಿಲ್ಲವೆನ್ನುವ ಒಂದು ಪ್ರಶ್ನೆ ಇಲ್ಲಿ ಉದ್ಭವವಾಗಿದೆ ವಿಧಾನ ಪರಿಷತ್ತು ಸದಸ್ಯರು ಆ ಕ್ಷೇತ್ರವನ್ನು, ಆ ತಾಲ್ಲೂಕನ್ನು ನೋಡಲ್ ತಾಲ್ಲೂಕು ಎಂದು declare ಮಾಡಿಕೊಂಡಿರದಿದ್ದರೆ ಇಲ್ಲವೆಂದು ನೀವು ಹೇಳಬೇಕು 40 ಕ್ಷೇತ್ರದಿಂದ ಒಬ್ಬರು MLA ಆಗುತ್ತಾರೆ 35 ಕ್ಷೇತ್ರಗಳಿಂದ ಒಬ್ಬರು MLC ಆಗುತ್ತಾರೆ ನಾವು ಅವರೆಲ್ಲರನ್ನು ಕರೆದುಕೊಂಡು ಶಿಷ್ಟಾಚಾರವೆಂದು ಹೇಳುವುದಕ್ಕೆ ಆಗುತ್ತದೆಯೇ ಎನ್ನುವುದು ನಮ್ಮ ಪ್ರಶ್ನೆ ಈ ಶಾಸನ ಸಭೆಯಲ್ಲಿ ಚರ್ಚೆಯಾಗಿದೆ He has to declare one taluk as nodal taluk ಆ ನೋಡಲ್ ತಾಲ್ಲೂಕಿನಲ್ಲಿ ಯಾರಾದರೂ MLC ಇಲ್ಲದೇ ಮಾಡಿದ್ದರೆ ಬಹುಶಃ ಅದು ದೊಡ್ಡದಾಗಿರುತ್ತದೆ ತಪ್ಪು ಎಂದು ನಾವು ಕೂಡ ಹೇಳುತ್ತೇವೆ ಆದರೆ ಇದನ್ನು ತಾವು ನಮಗೆ ಅನ್ವಯಿಸಿಕೊಟ್ಟರೆ ನಿಮ್ಮ ವಿಷಯಕ್ಕೆ ನಾನು ಮಾತನಾಡುತ್ತಿಲ್ಲ ಇಡೀ ರಾಜ್ಯಕ್ಕೆ ಇದು ಅನ್ವಯವಾಗಿ ಮೂರು–ಮೂರು MLC ಗಳು ಮೂರು ಮೂರು MP ಗಳು ರಾಜ್ಯಸಭಾ ಸದಸ್ಯರನ್ನು ಎಲ್ಲರನ್ನೂ ಕರೆಯುವುದು ಶಿಷ್ಟಾಚಾರ ಅಂದರೆ ಒಂದು ಶಾಲೆಯ ಗುದ್ದಲಿ ಪೂಜೆ ಮಾಡುವುದಕ್ಕೆ ಇದು ಬಂದರೆ ನಾವು ಯಾವ ಕೆಲಸಗಳನ್ನು ಸಹ ಮಾಡುವುದಕ್ಕೆ ಆಗುವುದಿಲ್ಲ MLC ಗಳನ್ನು ಬಿಟ್ಟಿದ್ದಾರೆ ಅಂದರೆ ಅವರು ಆ ತಾಲ್ಲೂಕನ್ನು ಅವರು ನೋಡಲ್ ತಾಲ್ಲೂಕು ಎಂದು declare ಮಾಡಿಕೊಂಡಿದ್ದಾರಾ ಇಲ್ಲವೇ ಎನ್ನುವುದು ಒಂದು ಎರಡನೆಯದು, ಅಂದರೆ ಇಲ್ಲಿ ಯಾವುದೇ ಆಹ್ವಾನ ಪತ್ರಿಕೆ ಪ್ರಿಂಟ್ ಆಗಿಲ್ಲ ಅವರು ದೇವಸ್ಥಾನಕ್ಕೆ ಪೂಜೆ ಮಾಡುವುದಕ್ಕೆ ಹೋದಾಗ ಆಕಸ್ಮಾತ್ ಅವರು ಮಾಡಿರಬಹುದು ಅಂತ ಅವರು ಹೇಳುತ್ತಿದ್ದಾರೆ ಆದರೆ ಇದನ್ನು ಇಷ್ಟೊಂದು ದೊಡ್ಡದು ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ಬಿ ಎಸ್ ಹೊರಟ್ಟಿ – ದೊಡ್ಡದಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ತಾವು ನಮ್ಮ ಕಡೆಗೆ ಬನ್ನಿ ಸ್ವಾಮಿ! ದಿವಸ ಒಂದೊಂದು ಈ ತರಹ ನಡೆಯುತ್ತಿರುತ್ತವೆ ತೋರಿಸುತ್ತೇನೆಂದರೆ ತಾವು ಬರುವುದಿಲ್ಲ ನಾನು ಮಂತ್ರಿಗಳನ್ನು ಆರು ತಿಂಗಳಿನಿಂದ ಕರೆಯುತ್ತಿದ್ದೇನೆ ನಮ್ಮ ಚಿಕ್ಕನಾಯಕನಹಳ್ಳಿಗೆ ಬನ್ನಿ ಎಂದು ಒಂದಷ್ಟು ಕಾರ್ಯಕ್ರಮ ಮಾಡಿಕೊಡಿ ಅಂತ ಮಂತ್ರಿಗಳಾದವರು ಕ್ಷೇತ್ರಕ್ಕೆ ಸೀಮಿತವಾದರೆ ಬೇರೆ MLA ಗಳ ಗತಿ ಏನು?

ಒಬ್ಬ ಮಾನ್ಯ ಸದಸ್ಯರು – ಚಿಕ್ಕನಾಯಕನಹಳ್ಳಿಗೆ ಹೋದರೆ ಮಂತ್ರಿ ಸ್ಥಾನ ಹೋಗಬಹುದು ಎಂದು ಭಯವಿರಬಹುದು

ಶ್ರೀ ಜೆ ಸಿ ಮಾಧುಸ್ವಾಮಿ – ಚಿಕ್ಕನಾಯಕನಹಳ್ಳಿಗೆ ಬೇಡ ಸ್ವಾಮಿ, ತಿಪಟೂರಿಗೆ ಬನ್ನಿ ನಾನು ಹೊರಟ್ಟಿಯವರನ್ನು ಕರೆದಿದ್ದೇನೆ ಆರು ತಿಂಗಳಿನಿಂದ ಕರೆಯುತ್ತಿದ್ದೇನೆ ತಾವು ಬರಬೇಕು ಸಾರ್ 2–3 ಜೂನಿಯರ್ ಕಾಲೇಜಿನ ಶಂಕುಸ್ಥಾಪನೆ ಮಾಡಬೇಕು, ಪೆಂಡಿಂಗ್ ಇಟ್ಟಿದ್ದೇವೆ ಮಾನ್ಯ ಶ್ರೀಕಂಠಯ್ಯನವರ ಒಂದು ಕಾರ್ಯಕ್ರಮಕ್ಕೆ ಬನ್ನಿ ಎಂದು ಕರೆದೆ

ಶ್ರೀ ಬಿ ಎಸ್ ಹೊರಟ್ಟಿ – ಅದೇ ಊರಿನಲ್ಲಿ ಹಿಂದೆ ಸಹ ಮಾಡಿದ್ದಾರೆ ಆಹ್ವಾನ ಪತ್ರಿಕೆಯನ್ನು ಸಹ ಪ್ರಿಂಟ್ ಮಾಡಿದ್ದಾರೆ ಬೇರೆ ಊರಿನಲ್ಲಿ ಈ ತರಹ ಆಗುವುದಿಲ್ಲ ಅದು ಒಂದೇ ಊರಿನಲ್ಲಿ ಏತಕ್ಕೆ ಈ ತರಹ ಆಗುತ್ತದೆ? ಅಲ್ಲಿನ ಜನ ಗಲಾಟೆ ಮಾಡಿದ್ದಾರೆ ಇದೆಲ್ಲಾ ಆಗಬಾರದು ಅಂತ ಹೇಳಿದ್ದಾರೆ ಆದರೂ ಮಾಡಿದ್ದಾರೆ ಆದ್ದರಿಂದ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೇವೆ

ಶ್ರೀ ವಾಟಾಳ್ ನಾಗರಾಜ್ – ಅವರನ್ನು ಅಮಾನತ್ತು ಮಾಡುವಂತಹ ಗುರುತರವಾದಂತಹ ಆಪಾದನೆ ಏನಾದರೂ ಇದೆಯೇ? ಇದು ಸರಿಯಲ್ಲ ಮಂತ್ರಿಗಳು ಈ ರೀತಿ ಮಾಡಿದರೆ ಇದು ವೈಯಕ್ತಿಕ ದ್ವೇಷವಾಗುತ್ತದೆ ಇದು ಸರಿಯಾದ ಕ್ರಮವಲ್ಲ ಏಕೆ ಈ ತರಹ ಅದಿರಿ ನೀವು?

ಶ್ರೀ ಬಸವರಾಜ ಹೊರಟ್ಟಿ :– ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಮತ್ತು ಮಾಧುಸ್ವಾಮಿಯವರು ಕರಿ ನಾಯಿಯನ್ನು ಬಿಳಿ ನಾಯಿ ಮಾಡುತ್ತಾರೆ, ಬಿಳಿ ನಾಯಿಯನ್ನು ಕರಿ ನಾಯಿ ಮಾಡುತ್ತಾರೆ ಅವರು ಸದನದಲ್ಲಿ ಯಾವಾಗ ಏನು ಮಾಡುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ ನೋಡಲ್ ತಾಲ್ಲೂಕ್ ಅಂತ declare ಮಾಡಿಕೊಂಡಿರುವ MLC ಗಳನ್ನು ಮಾತ್ರ ಕರೆಯಬೇಕೆಂದು ಇಲ್ಲಿ ಆಗಿದೆ

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ – ಊರಿನಲ್ಲಿ ಗಲಾಟೆಯಾಗಿದೆ ಲಾ ಅಂಡ್ ಆರ್ಡರ್ problem ಬರಬಹುದು ಅಂತ ದೂರುಗಳು ಸಹ ಬಂದವು ಆದ್ದರಿಂದ ಅವರನ್ನು ಅಮಾನತ್ತು ಮಾಡಲಾಗಿದೆ ಆ ಬಗ್ಗೆ ವಿಚಾರಣೆ ಮಾಡುತ್ತಾರೆ, ಅವರು ತಪ್ಪಿತಸ್ಥರು ಇಲ್ಲವೆಂದರೆ ಪುನಃ ವಾಪಸ್ಸ್ ಬರುತ್ತಾರೆ

ಉಪಾಧ್ಯಕ್ಷರು – ಈಗ ಸಮಸ್ಯೆ ಗೊತ್ತಾಯಿತಲ್ಲ

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ್ – MLC ಗಳು ಯಾರಿರಬೇಕು, ಶಿಕ್ಷಕರ ಕ್ಷೇತ್ರದಿಂದ ಆರಿಸಿ ಬಂದವರು ಎಲ್ಲಿರಬೇಕು ಎನ್ನುವುದನ್ನು ಸರ್ಕಾರ ಒಂದು guide lines issue ಮಾಡಲಿ

(ಗೊಂದಲ)

ಶ್ರೀ ಬಸವರಾಜ ಹೊರಟ್ಟಿ – ನಿಯಮಗಳನ್ನು ಮಾಡಿಲ್ಲ Circular ಆಗಿದೆ

ಒಬ್ಬ ಮಾನ್ಯ ಸದಸ್ಯರು – Guide lines issue ಮಾಡಬೇಕು ಮೂರು ಮೂರು ಜಿಲ್ಲೆಗಳಲ್ಲಿ MLC ಗಳು ಬರುತ್ತಾರೆ ಇಡೀ ಜಿಲ್ಲೆಯಲ್ಲಿ ಅವರು ಅಧಿಕಾರಿಗಳ ಮೇಲೆ ದಬ್ಬಾಳಿಕೆಯನ್ನು ಮಾಡುವುದು ನಾನು ನನ್ನ ಜಿಲ್ಲೆಯಲ್ಲಿ ನೋಡಿದ್ದೇನೆ

(ಗೊಂದಲ)

ಉಪಾಧ್ಯಕ್ಷರು – ಮಾನ್ಯ ಮಂತ್ರಿಗಳು ಈ ಬಗ್ಗೆ ಏನಾದರೂ ಒಂದು ಪರಿಹಾರ ಕಂಡು ಹಿಡಿಯಬೇಕು

ಶ್ರೀ ಬಸವರಾಜ್ ಹೊರಟ್ಟಿ – ದಿನಾಂಕ 25 2 2005 ಕ್ಕೆ ಒಂದು Circular ಹೊರಡಿಸಿದ್ದಾರೆ ಆ ಪ್ರಕಾರ ನಾನು ಮಾತನಾಡುತ್ತಿದ್ದೇನೆ ಕಾನೂನು ಮಾಡಿದರೆ ಆಗ ಅದರಂತೆ ಹೋಗೋಣ

ಉಪಾಧ್ಯಕ್ಷರು – ಆ ಬಗ್ಗೆ guide lines ಇದೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ – ತಾವು ಕಾನೂನು ಮಾಡಿದ್ದೀರಾ?

ಶ್ರೀ ಬಸವರಾಜ ಹೊರಟ್ಟಿ – ಕಾನೂನು ಇದೆ ಜನಪ್ರತಿನಿಧಿಗಳನ್ನು ಕರೆಯಬೇಕು ಅಂತ

ಶ್ರೀ ಜೆ ಸಿ ಮಾಧುಸ್ವಾಮಿ – ನಾನು ಈ ಸಭೆಯಲ್ಲಿ ಚರ್ಚೆ ಮಾಡಿ, ನನ್ನ ತಾಲ್ಲೂಕಿನಲ್ಲಿ KDP meeting ಮಾಡಿದ್ದರ ಬಗ್ಗೆ ನಾನು ಇಲ್ಲಿ ಬಂದು ಚರ್ಚೆ ಮಾಡಿದಾಗ ನೋಡಲ್ ತಾಲ್ಲೂಕ್ ಎಂದು declare ಮಾಡಿಕೊಂಡಾಗ ಮಾತ್ರ ಸಭೆಯನ್ನು ಕರೆಯಬೇಕು ಎಂದು ಆಗಿದೆ ಚೀಫ್ ಸೆಕ್ರೆಟರಿ ಅವರ ಆರ್ಡರ್‌ಗಳನ್ನು ನಾನು ಇಲ್ಲಿಯೇ ಓದಿ ಹೇಳಿದ್ದೇನೆ Including the Leader of Opposition cannot call a meeting of officers in a taluk ಎಂದು ಓದಿದ್ದೇನೆ ನೋಡಲ್ ತಾಲ್ಲೂಕ್ ಅಂತ ಒಬ್ಬ MLC ಯವರು declare ಮಾಡಿಕೊಂಡರೆ, yes, he comes in the protocol of that taluk, not in all constituencies or areas wherever he presents ನಾಲ್ಕು ನಾಲ್ಕು ತಾಲ್ಲೂಕಿಗೆ ಒಬ್ಬರು MLC ಗಳು ಅಂದರೆ ಎಲ್ಲಿ ಕರೆದುಕೊಂಡು ಕುಳಿತುಕೊಳ್ಳೋಣ ನಾವು? ಇದನ್ನು ತಾವು ಸೀರಿಯಸ್ ಆಗಿ view ಮಾಡಬೇಕು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ – MLC ಗಳು MP ಗಳು ಬರುವವರೆಗೂ ನಾವು ಕಾದಿರಬೇಕೇನು? ಏನಿದು ಹುಡುಗಾಟ? ಇದು ಸರಿಯಿಲ್ಲ

(ಗೊಂದಲ)

ಉಪಾಧ್ಯಕ್ಷರು – 15–20 ನಿಮಿಷವಾಯಿತು ಈ ಪ್ರಶ್ನೆಗೆ

ಒಬ್ಬ ಮಾನ್ಯ ಸದಸ್ಯರು – ಇಲ್ಲಿ ಒಂದು ಸಮಸ್ಯೆ ಕಾಣುತ್ತಿದೆ ಆ Invitation card original ಅಥವಾ duplicate ಅಂತ ಗೊತ್ತಾಗುತ್ತಿಲ್ಲ ಅದನ್ನು ತಿಳಿದುಕೊಂಡ ಮೇಲೆ ಅವರನ್ನು ಸಸ್ಪೆಂಡ್ ಮಾಡಬೇಕಲ್ಲ

ಉಪಾಧ್ಯಕ್ಷರು – Suspension is not a punishment ಅಂತ ಅವರು ಹೇಳಿದ್ದಾರೆ ನೋಡಲ್ ತಾಲ್ಲೂಕು ಅಂತ declare ಮಾಡಿಕೊಳ್ಳಬೇಕು ಅಂತ guide line ಇದೆ For example, ಈಗ municipal ಮತ್ತು ಪಟ್ಟಣ ಪಂಚಾಯಿತಿ ಚುನಾವಣೆಗಳು ಬಂದಾಗ ಅವರು ಎಲ್ಲಿಯಾದರೂ ಒಂದು ತಾಲ್ಲೂಕನ್ನು ಆಯ್ಕೆ ಮಾಡಿಕೊಳ್ಳಬೇಕು ಇದು ನಡೆದುಕೊಂಡು ಬರುತ್ತಿದೆ ಆ ಲಾಜಿಕ್‌ನಲ್ಲಿ ಅವರು ಕೇಳುತ್ತಿದ್ದಾರೆ

(ಗೊಂದಲ)

ಶ್ರೀ ಅಮರೇಗೌಡ ಬಯ್ಯಾಪುರ್ – MP ಗಳು ಎಲ್ಲಾ ಮುನಿಸಿಪಾಲಿಟಿಗಳಲ್ಲಿ, ಪಟ್ಟಣ ಪ್ರದೇಶಗಳಲ್ಲಿ ಓಟು ಮಾಡುತ್ತಾರೆ

ಶ್ರೀ ಜೆ ಸಿ ಮಾಧುಸ್ವಾಮಿ – You are right ನೀವು ಹೇಳುವುದು ಸರಿ MP ಗಳು ಅವರ Constituency ಗೆ ಬರವು 8 Assembly constituency, ಪುರಸಭೆಗಳಲ್ಲೂ voters ಆಗಿದ್ದಾರೆ ಆದರೆ MLC ಗಳು ಒಂದೇ ಒಂದು ಕ್ಷೇತ್ರವನ್ನು declare ಮಾಡಿಕೊಳ್ಳಬೇಕೆಂದು ಆದೇಶವಾಗಿದೆ MP ಗಳು ಎಂಟು ಕಡೆ ಓಟು ಹಾಕುತ್ತಿದ್ದಾರೆ, ಅದು ಸಹ ಇತ್ಯರ್ಥವಾಗಬೇಕು

ಉಪಾಧ್ಯಕ್ಷರು – ಒಂದೇ ಕಡೆ ಓಟು ಹಾಕುತ್ತಿರುವುದು

ಶ್ರೀ ಜೆ ಸಿ ಮಾಧುಸ್ವಾಮಿ – ಎಂಟು ಕಡೆ ಓಟು ಮಾಡುತ್ತಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ – ಒಂದು ತಾಲ್ಲೂಕು ಎಂದು ಡಿಕ್ಲೇರ್ ಮಾಡಿಕೊಂಡರೆ ಇನ್ನೊಂದು ತಾಲ್ಲೂಕು ವೋಟರ್ ಆಗುವುದಿಲ್ಲ ಅಂತ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಇವರು ಸುಮಾರು ಸಲ ಆದೇಶ ಕೊಟ್ಟಿದ್ದಾರೆ ನಾನು ಅದನ್ನು ನಿಮಗೆ ತೋರಿಸುತ್ತೇನೆ

ಶ್ರೀ ಬಸವರಾಜ ಹೊರಟ್ಟಿ – ತಪ್ಪು ಮಾಹಿತಿ ಹೋಗಬಾರದು

ಶ್ರೀ ಸಿದ್ಧರಾಮಯ್ಯ – ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಆದ್ದರಿಂದ ಕ್ರಮ ತಗೊಂಡಿದ್ದೇವೆ ಅಂತ ಅವರು ಹೇಳುತ್ತಿದ್ದಾರೆ ಇವರೇನು ಹೇಳುತ್ತಾರೆ

ಅಂದರೆ ಒಬ್ಬ MLC ಸುಮಾರು ಎರಡು ಮೂರು ಜಿಲ್ಲೆ ಪ್ರತಿನಿಧಿಸುತ್ತಾರೆ ಎಲ್ಲರೂ ಅವರನ್ನು ಕರೆಯೋದು ಬಹಳ ಕಷ್ಟವಾಗುತ್ತದೆ ಆ ಕಾರಣದಿಂದ ಅವರು ಯಾವುದಾದರೂ ಒಂದು ಕ್ಷೇತ್ರ nodal ಕ್ಷೇತ್ರ ಅಂತ ಮಾಡಿಕೊಂಡರೆ ಸರಿ, ಹಾಗೆ ಮಾಡಲಾಗಿದೆ ಅಂತ ಬಹಳ ಸ್ಪಷ್ಟವಾಗಿ ಇವರು ಹೇಳುತ್ತಿದ್ದಾರೆ ಅದಿದ್ದರೆ ಅದರ ಪ್ರಕಾರ ಅವರು ಉಲ್ಲಂಘನೆಗೆ ಬರುವುದಿಲ್ಲ ಆಗ ಅವರನ್ನು reinstate ಮಾಡಿ

ಡಾ॥ ಶಿರಿಯಣ್ಣನವರ್ – ತಾಲ್ಲೂಕು ಸಮಿತಿ ಮಾಡುವಾಗಲೂ ಸರ್ಕಾರ guidelines clear ಆಗಿ ಕೊಟ್ಟಿದೆ ಯಾವ ತಾಲ್ಲೂಕಿನಲ್ಲಿ MLC ವಾಸವಾಗಿರುತ್ತಾರೆ ಅವರೇ ಸದಸ್ಯರಾಗಲು ಅರ್ಹರು ಅಂತ clearcut guidelines ಇದೆ ಅದರನ್ವಯವೂ ಸಹ ನಾವು ಪ್ರತಿ MLC ಯನ್ನು ಕರೆಯಲು ಆಗುವುದಿಲ್ಲ ಒಂದು ವೇಳೆ ಕರೆಯಬೇಕೆಂದು ಇದ್ದರೂ ಸರ್ಕಾರಿ ಕಾರ್ಯಕ್ರಮದಲ್ಲಿ ಕರೆಯಬಹುದೇ ಹೊರತು ಖಾಸಗಿ ಕಾರ್ಯಕ್ರಮಕ್ಕೆ ಕರೆಯುವುದಿಲ್ಲ ಇದು private function ಮಾಡಿದ್ದು, ಇದರಲ್ಲಿ ಕಾಂಗ್ರೆಸ್, ಜೆಡಿಎಸ್, ಬಿಜೆಪಿಯವರು ಜೆಡಿಯು ಎಲ್ಲರೂ ಇದ್ದಾರೆ

ಉಪಾಧ್ಯಕ್ಷರು – ಸಂಬಂಧಪಟ್ಟ guidelines ತರಿಸಿಕೊಂಡು ನಾಳೇನೆ ಚರ್ಚೆಸೋಣ

ಶ್ರೀ ಬಸವರಾಜ ಹೊರಟ್ಟಿ – ಮಾಧುಸ್ವಾಮಿ ಹೇಳಿದಂತೆ ಇದಕ್ಕೊಂದು ನಿಯಮವಿದ್ದು ಅದರ ಪ್ರಕಾರ ಅವರದೇನೂ ತಪ್ಪಿಲ್ಲ ಅಂದರೆ ನಾಳೆ ಅವರನ್ನು reinstate ಮಾಡುತ್ತೇವೆ ಇಲ್ಲಿ ಏನು ಬರುತ್ತದೆ ಅಂದರೆ ನನ್ನ ಹೆಸರು ಹಾಕಿಲ್ಲ ಅಂತ ಸಸ್ಪೆಂಡ್ ಮಾಡಲಾಗಿದೆ ಎಂಬ ಭಾವನೆ ಸದನಕ್ಕೆ ಬರುತ್ತದೆ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾರೆಂದು ವರದಿ ಕೊಟ್ಟಿದ್ದಕ್ಕೆ ಮಾಡಿದ್ದೇನೆ ನಿಯಮವಿದ್ದರೆ ಖಂಡಿತ ಅವರನ್ನು ನಾಳೆನೇ instate ಮಾಡಿ ಸದನಕ್ಕೆ ತಿಳಿಸುತ್ತೇನೆ

ಶ್ರೀ ಎಸ್ ಎಸ್ ಪಾಟೀಲ್ – ತರಿಸಿ ನೋಡ್ರಿ MLA ನೇ ಅಧ್ಯಕ್ಷರನ್ನು ಮಾಡಬೇಕೆಂದು ಅದರಲ್ಲಿ ಎಲ್ಲೂ ಇಲ್ಲ ಹಿಂದೆ ಚರ್ಚೆಯಾಗಿದೆ, ಅದೂ ಕೂಡ ಚೇಂಜಾಗಬೇಕು

(ಗೊಂದಲ)

ಉಪಾಧ್ಯಕ್ಷರು – MLA ನೇ ಮಾಡಬೇಕು ಅಂತ ಇದೆ

ಶ್ರೀ ಜೆ ಸಿ ಮಾಧುಸ್ವಾಮಿ – ನೋಡಿ ಆದೇಶ ಇಲ್ಲೇ ಇದೆ ನಮ್ಮ Hand book, page 469 ರಲ್ಲಿ, ವಿಧಾನಪರಿಷತ್ತಿನ ಸದಸ್ಯರಲ್ಲಿ ಕೆಲವರು ಪದವೀಧರ ಕ್ಷೇತ್ರ, ಶಿಕ್ಷಕರ ಕ್ಷೇತ್ರ, local authorities ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ಆಯ್ಕೆ ಆಗಿದ್ದು ಅವರ ಚುನಾವಣಾ ಕ್ಷೇತ್ರ ನಿರ್ದಿಷ್ಟವಾಗಿರದ ಕಾರಣ ಸ್ಥಳೀಯ ಶಾಸಕರೆಂದು ಗುರುತಿಸಲು ಅವರ ಮತಕ್ಷೇತ್ರದಲ್ಲಿ ಬರುವ ಅವರಿಷ್ಟಪಡುವ ಯಾವುದಾದರೂ ಒಂದು ತಾಲ್ಲೂಕನ್ನು nodal ತಾಲ್ಲೂಕೆಂದು ಮತ್ತು ನಾಮನಿರ್ದೇಶನ ಹೊಂದಿದ ವಿಧಾನಪರಿಷತ್ ಸದಸ್ಯರು ಹಾಗೂ ವಿಧಾನಸಭೆಯಿಂದ ಆಯ್ಕೆಗೊಂಡ ವಿಧಾನಪರಿಷತ್ ಸದಸ್ಯರು ಅವರಿಷ್ಟಪಡುವ ತಾಲ್ಲೂಕನ್ನು ನೋಡಲ್ ತಾಲ್ಲೂಕೆಂದು ಪರಿಗಣಿಸಿ ಅವರನ್ನು ಸರ್ಕಾರದ ಅಧಿಕೃತ ಸಮಾರಂಭಕ್ಕೆ ಆದ್ಯತೆ ಮೇಲೆ ಆಹ್ವಾನಿಸಲು ಅವರ ಹೆಸರನ್ನು ಆಹ್ವಾನಪತ್ರಿಕೆಯಲ್ಲಿ ಮುದ್ರಿಸಲು ಕ್ರಮ ಕೈಗೊಳ್ಳಬೇಕು This is rule, ಇನ್ನೇನು ಚರ್ಚೆ ಮಾಡುವುದಿದೆ? 468ನೇ ಪುಟದಲ್ಲಿ ಕರ್ನಾಟಕ ಸರ್ಕಾರದ ನಡವಳಿಕೆಗಳು ಅಂತ ಬಂದು ಇ ಸಬ್ ಸೆಕ್ಷನ್‌ನಲ್ಲಿ ಅಡಿಶನಲ್ ಪ್ಯಾರದಲ್ಲಿ ರೂಲ್ ಕ್ಲಿಯರಾಗಿದೆ

ಉಪಾಧ್ಯಕ್ಷರು – ನೀವಿಷ್ಟಪಟ್ಟರೆ 5ನೇ ತಾರೀಖಿನವರೆಗೆ ಈ ಸದನ ನಡೆಯುತ್ತದೆ ಶಿಷ್ಟಾಚಾರದ ಬಗ್ಗೇನೆ ಚರ್ಚೆಯಾಗಬೇಕೆಂದರೆ ಒಂದು ಗಂಟೆ ಚರ್ಚೆ ಇಟ್ಟುಕೊಳ್ಳೋಣ

ಶ್ರೀ ಬಸವರಾಜ ಹೊರಟ್ಟಿ – ಆಯಿತು ಈಗ ತಪ್ಪಾಗಿದ್ದರೆ ಸರಿಪಡಿಸುತ್ತೇನೆ ಅಂತ ಹೇಳಿದ್ದೀನಲ್ಲ

ಸರ್ಕಾರಿ ಪ್ರಥಮ ದರ್ಜೆ ಕಾಲೇಜ್

299 (2094) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) – ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?